ದಿನಾಂಕಃ **25.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **:** ಎದುರುದಾರರ ಪರ ವಕೀಲರಿಂದಃ

01. ಮುಖ್ಯವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೆ. ಮೃತ ನಾಗಮ್ಮ ನನಗೆ ಅಜ್ಜಿಯಾಗಬೇಕು. ನನ್ನ ತಾಯಿ ದೇವಮ್ಮ ನನ್ನ ಅಜ್ಜಿ ನಾಗಮ್ಮನಿಗೆ ಒಬ್ಬಳೇ ಮಗಳಾಗಿದ್ದಳು. 2 ನೇ ಅರ್ಜಿದಾರ ನನಗೆ ತಮ್ಮನಾಗಬೇಕು. ನಾವು ನನ್ನ ಅಜ್ಜಿಯ ವಾರಸುದಾರರು ಯಾರನ್ನೂ ಈ ಅರ್ಜಿಗೆ ಸೇರಿಸಿಲ್ಲ ಎಂದರೆ ನನ್ನ ತಾಯಿ ಕೂಡಾ ಮೃತಪಟ್ಟಿದ್ದು, ನನ್ನ ಅಜ್ಜಿಗೆ ನಾವಿಬ್ಬರೇ ವಾರಸುದಾರರು. 17 ವರ್ಷಗಳ ಕಾಲ ತಡವಾಗಿ ಪರಿಹಾರ ಕೋರಿ ಅರ್ಜಿ ಸಲ್ಲಿಸಲು ಏನು ಕಾರಣ? ಎಂದರೆ ನನ್ನ ತಾಯಿ ಬಳ್ಳಾರಿಯಲ್ಲಿ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದು, ಅದನ್ನು ನಡೆಸುತ್ತಿದ್ದ ವಕೀಲರು ಮೃತಪಟ್ಟಿದ್ದರಿಂದ ಸದರಿ ಕೇಸನ್ನು ಕ್ಲಿಯರ್ ಮಾಡಿಸಿಕೊಂಡು ಇಲ್ಲಿ ಅರ್ಜಿ ಸಲ್ಲಿಸಿದ್ದೇವೆ. ಬಳ್ಳಾರಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅರ್ಜಿಯಲ್ಲಿ ಏನು ಆದೇಶ ಆಗಿದೆ ಎಂಬ ಬಗ್ಗೆ ದಾಖಲೆಗಳನ್ನು ಹಾಜರು ಮಾಡುತ್ತೀರಾ? ಎಂದರೆ ಮನೆಯಲ್ಲಿ ಹುಡುಕಿ, ಸಿಕ್ಕರೆ ಹಾಜರು ಮಾಡುತ್ತೇನೆ. ನಾನು ಸರ್ಕಾರಿ ಶಾಲಾ ಶಿಕ್ಷಕಿಯಾಗಿರುತ್ತೇನೆ. ನನಗೆ ಮಾಸಿಕ ವೇತನ ರೂ. 85 ಸಾವಿರ ಇರುತ್ತದೆ. ಆದ್ದರಿಂದ ನಾನು ನನ್ನ ಅಜ್ಜಿ ನಾಗಮ್ಮಳ ಅವಲಂಬಿತಳು ಎಂಬ ವ್ಯಾಖ್ಯಾನದ ಕೆಳಗಡೆ ಬರುವುದಿಲ್ಲ ಎಂದರೆ ಸರಿಯಲ್ಲ.

02. ನನ್ನ ಅಜ್ಜಿ ಹೊಟೆಲ್ ನಡೆಸುತ್ತಿದ್ದರು. ಅರ್ಜಿಯಲ್ಲಿ ನನ್ನ ಅಜ್ಜಿ ಕೂಲಿ ಕೆಲಸ ಮಾಡುತ್ತಿದ್ದಳೆಂದು ಬರೆಯಿಸಿ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಹೊಟೆಲ್ ನಡೆಸುತ್ತಿದ್ದ ಬಗ್ಗೆ ಲೈಸೆನ್ಸ್ ವಗೈರೆ ಹಾಜರು ಮಾಡಿಲ್ಲ ಎಂದರೆ ಮನೆಯಲ್ಲೇ ಚಿಕ್ಕದಾಗಿ ಹೊಟೆಲ್ ನಡೆಸುತ್ತಿದ್ದರು. ನನ್ನ ಅಜ್ಜಿ ದಿನಕ್ಕೆ ರೂ. 500/- ರಂತೆ ತಿಂಗಳಿಗೆ ರೂ. 15 ಸಾವಿರ ಹಣವನ್ನು ಸಂಪಾದನೆ ಮಾಡುತ್ತಿದ್ದರು. ಕೊಂಬಳಿ ಗ್ರಾಮ ಚಿಕ್ಕ ಊರಾಗಿರುವ ಕಾರಣ ಅಷ್ಟು ಮೊತ್ತವನ್ನು ಹೊಟೆಲ್ ನಡೆಸುವ ಮೂಲಕ ಸಂಪಾದನೆ ಮಾಡಲು ಸಾಧ್ಯವಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದ 1 ನೇ ಪ್ಯಾರಾದಲ್ಲಿ ಹೇಳಿರುವಂತೆ ಚಾಲಕನ ಅಜಾಗರೂಕತೆ ಮತ್ತು ಅತೀ ವೇಗದಿಂದ ಅಪಘಾತ ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ. ನಾವು ಅವಲಂಬಿತರಲ್ಲವಾದ್ದರಿಂದ ಯಾವುದೇ ಪರಿಹಾರ ಪಡೆಯಲು ಅರ್ಹರಲ್ಲದಿದ್ದರೂ ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.